**ದಿನಾಂಕಃ 18.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ವಾದಿಯ ಪರ ಶ್ರೀ ಪಿ.ವಿ.ಪಿ. ವಕೀಲರಿಂದಃ**

3. ನಾನು ಹಾಜರುಪಡಿಸಿದ ನಿಡಿ 15 ಪಾಲು ವಿಭಾಗ ಪತ್ರದಲ್ಲಿ ಐಟಂ ನಂ 4 ರ ಆಸ್ತಿಯಲ್ಲಿ 1 ರಿಂದ 3 ನೇ ಪ್ರತಿವಾದಿಗಳಿಗೆ 4 ಎಕರೆ 85 ವರೆ ಸೆಂಟ್ಸ್ ಮತ್ತು ನನ್ನ ತಂದೆಗೆ 6 ಎಕರೆ 85 ವರೆ ಸೆಂಟ್ಸ್ ಹಿಸ್ಸೆ ಬಂದಿರುವುದಾಗಿ ತೋರಿಸಿದ್ದಾರೆ ಎಂದರೆ ಸರಿ. ಅದೇ ನಿಡಿ 15 ರಲ್ಲಿ ಐಟಂ ನಂ.4 ರಲ್ಲಿ 1 ನೇ ವಾದಿಗೆ 2 ಎಕರೆ ಹಿಸ್ಸೆ ಬಂದಿರುವುದಾಗಿ ತೋರಿಸಿದ್ದಾರೆ ಎಂದರೆ ಸರಿ. ಅದೇ ಪ್ರಕಾರವಾಗಿ 1 ರಿಂದ 3 ನೇ ಪ್ರತಿವಾದಿಗಳು, ನನ್ನ ತಂದೆ ಮತ್ತು 1 ನೇ ವಾದಿ ಅವರವರ ಹೆಸರುಗಳಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾರೆಯೇ? ಎಂದರೆ ಹೌದು, ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾರೆ. ಆ ರೀತಿ ಖಾತೆ ಬದಲಾವಣೆ ಯಾವ ಇಸವಿಯಲ್ಲಿ ಆಗಿತ್ತು? ಎಂದರೆ 2012 ನೇ ಇಸವಿಯಲ್ಲಿ ಆಗಿತ್ತು. 2012 ನೇ ಇಸವಿಯ ಖಾತೆ ಬದಲಾವಣೆಯನ್ನು ನನ್ನ ತಾಯಿ 6 ಎಕರೆ 84 ಸೆಂಟ್ಸ್ ಗೆ ಮತ್ತು 1 ರಿಂದ 3 ನೇ ಪ್ರತಿವಾದಿಗಳು 6 ಎಕರೆ 84 ಸೆಂಟ್ಸ್ ಗೆ ಮಾಡಿಸಿಕೊಂಡಿದ್ದಾರೆ ಎಂದರೆ ನಮ್ಮ ಹಿಸ್ಸೆಯ ಖಾತೆಯನ್ನು ನಾವು ಮಾಡಿಸಿಕೊಂಡಿದ್ದೇವೆ, 1 ರಿಂದ 3 ನೇ ಪ್ರತಿವಾದಿಗಳು ಆ ರೀತಿ 6 ಎಕರೆ 84 ಸೆಂಟ್ಸ್ ಅವರೇ ಮಾಡಿಸಿಕೊಂಡಿದ್ದಾರೆ. ನಿಡಿ 15 ರಂತೆ ಯಾವುದೇ ಪಾಲುವಿಭಾಗ ನಡೆಯದೇ ಇದ್ದರೂ ನಮಗೆ ಬೇಕಾದ ರೀತಿಯಲ್ಲಿ ದಾಖಲೆ ತಯಾರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ಐಟಂ ನಂ.4 ರಲ್ಲಿ 6 ಎಕರೆ 84 ಸೆಂಟ್ಸ್ ಗೆ ದಿನಾಂಕ 19.09.2016 ರಂದು ನೋಂದಾಯಿತ ಪಾಲುವಿಭಾಗ ಪತ್ರ ಮಾಡಿಸಿಕೊಂಡಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸುವ ಮುಂಚೆ ನಾನು 1 ರಿಂದ 3 ನೇ ಪ್ರತಿವಾದಿಗಳು ನೋಂದಾಯಿತ ಪಾಲುವಿಭಾಗ ಮಾಡಿಕೊಂಡ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಮಾಡಲಿಲ್ಲವೇ? ಎಂದರೆ ಇಲ್ಲ. 1 ರಿಂದ 3 ನೇ ಪ್ರತಿವಾದಿಗಳು ಮಾಡಿಕೊಂಡಿರುವ ವ್ಯವಹಾರಗಳ ಬಗ್ಗೆ ಮತ್ತು ಅವರ ದಾಖಲೆಗಳ ಬಗ್ಗೆ ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ ಎಂದರೆ ಸರಿ.

4. ಈ ದಾವೆಯ 3 ನೇ ಪ್ರತಿವಾದಿ ಅಕ್ಕ ಈ ದಾವಾ ವಿಚಾರಣೆಯಲ್ಲಿ ಇರುವಾಗಲೇ 10 ನೇ ಪ್ರತಿವಾದಿಗೆ ಕ್ರಯ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲವೇ? ಎಂದರೆ ಮಾಹಿತಿ ಇಲ್ಲ. ವಾದಿಗಳ ಹೆಸರುಗಳನ್ನು ಸೇರಿಸಿ ದಾಖಲೆಗಳನ್ನು ಸೃಷ್ಟಿಸುವುದು ಮತ್ತು ನಂತರ ಸದರಿ ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡುವುದನ್ನು ನಾನು ಮತ್ತು ಉಳಿದ ಪ್ರತಿವಾದಿಗಳು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ನಾನು ಹೇಳಿದಂತೆ ವಾದಿಗಳಿಗೆ ಮತ್ತು ಪ್ರತಿವಾದಿಗಳಿಗೆ ಒಟ್ಟು ಕುಟುಂಬದಲ್ಲಿ ಯಾವತ್ತೂ ಪಾಲುವಿಭಾಗ ನಡೆದಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಗೊತ್ತಾಗದಂತೆ ನಮ್ಮ ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ರೀತಿ ಸೃಷ್ಟಿಸಿದ ದಾಖಲೆಗಳ ಆಧಾರದ ಮೇಲೆ ಈಗಾಗಲೇ ಪಾಲುವಿಭಾಗ ನಡೆದಿದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ವಾದಿಗಳು ಈ ಹಿಂದೆ ಪಾಲುವಿಭಾಗ ಕೋರಿ ಓ.ಎಸ್. ನಂ. 95/2017 ನ್ನು ದಾಖಲಿಸಿದ್ದರು ಎಂದು ಬರೆಯಿಸಿದ್ದೇನೆ ಎಂದರೆ ಆ ರೀತಿ ಬರೆಯಿಸಿದ್ದ ಬಗ್ಗೆ ನನಗೆ ನೆನಪಿಲ್ಲ. ಆ ದಾವೆಯಲ್ಲಿ ಏನು ಆದೇಶವಾಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. 2008 ರಲ್ಲಿ, 2016 ರಲ್ಲಿ ಮಾಡಿಕೊಂಡ ವಿಭಾಗ ಪತ್ರಗಳು ಮತ್ತು 10 ನೇ ಪ್ರತಿವಾದಿಯ ಕ್ರಯ ಪತ್ರ ವಾದಿಗಳ ಹಿಸ್ಸೆ ಹಕ್ಕಿಗೆ ಬಂಧಕವಾಗುವುದಿಲ್ಲ ಎಂದರೆ ಸರಿಯಲ್ಲ .

ವಾದಿಗಳಿಗೆ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 10 ನೇ ಪ್ರತಿವಾದಿಯ ಪರ ವಕೀಲರು ಇಲ್ಲವೆಂದು ತಿಳಿಸಿದ್ದಾರೆ.**

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**